



ಅರುಣ ಪಿ. ಭಟ್ಟ

## ವಾರಭವಿಷ್ಯ: 19.10.2023ದಿಂದ 25.10.2023ರವರೆಗೆ



**ಮೇಷ**

ಉದ್ಯೋಗಿಗಳಿಗೆ ವಾರದ ಶುರುವಿನಲ್ಲಿ ಉತ್ತಮ ಯಶಸ್ಸು. ಸಾಮಾಜಿಕವಾಗಿ ಜನಪ್ರಿಯತೆ ಹೆಚ್ಚಾಗಲಿದೆ. ಧಾರ್ಮಿಕ ಕ್ಷೇತ್ರಗಳಿಗೆ ಪ್ರಯಾಣ ಮಾಡುವ ಸಾಧ್ಯತೆ ಇದೆ. ಆರೋಗ್ಯವು ಉತ್ತಮವಾಗಿರುತ್ತದೆ. ಇದರಿಂದ ಉತ್ಸಾಹ ಹೆಚ್ಚಾಗಿ, ಹೊಸ ಕೆಲಸಗಳನ್ನು ಮಾಡಲು ಮನಸ್ಸು ಮಾಡುತ್ತೀರಿ. ದೀರ್ಘಾವಧಿ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ದೊರಕುತ್ತವೆ. ಶುಭದಿನ 20. ನವದುರ್ಗಾ ಆರಾಧನೆ ಮಾಡಿರಿ.



**ವೃಷಭ**

ಸಾರ್ವಜನಿಕ ಸಂಪರ್ಕದ ಮೂಲಕ ಅನುಕೂಲ ಆಗಲಿದೆ. ಮೇಲಧಿಕಾರಿಗಳ ಜೊತೆಗೆ ಉತ್ತಮ ಬಾಂಧವ್ಯ. ಕಾನೂನು ವಿಚಾರಗಳಲ್ಲಿ ವಿರೋಧಿಗಳ ವಿರುದ್ಧ ಮೇಲುಗೈ ಸಾಧಿಸುತ್ತೀರಿ. ಸಾಮಾಜಿಕ ಕಾರ್ಯಕರ್ತರಿಗೆ ವಾರದ ಮಧ್ಯ ಭಾಗದಲ್ಲಿ ಸಕಾರಾತ್ಮಕ ಬೆಳವಣಿಗೆ ಕಾಣುವ ಯೋಗ ಇದೆ. ವಾರಾಂತ್ಯದಲ್ಲಿ ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ 22. ಹನುಮಾನ್ ಚಾಲಿಸ್ ಪಠಿಸಿರಿ



**ಮಿಥುನ**

ವಾರದ ಶುರುವಿನಲ್ಲಿ ವೈವಾಹಿಕ ಜೀವನ ಸಂತೋಷವಾಗಿರುತ್ತದೆ. ಈವರೆಗಿನ ಭಿನ್ನಾಭಿಪ್ರಾಯ ನಿವಾರಣೆ ಆಗುತ್ತವೆ. ಆರೋಗ್ಯದ ಸಮಸ್ಯೆಗಳು ಈ ವರೆಗೆ ಇದ್ದಲ್ಲಿ ನಿಧಾನವಾಗಿ ಚೇತರಿಕೆ ಕಾಣಿಸಿಕೊಳ್ಳುತ್ತದೆ. ಆರ್ಥಿಕ ವಿಚಾರದಲ್ಲಿ ಉತ್ತಮ ಲಾಭವನ್ನು ಕಾಣಲಿದ್ದೀರಿ. ನಗದು ವ್ಯವಹಾರಗಳಲ್ಲಿ, ಪೆನ್ಷನ್ ವಿಚಾರದಲ್ಲಿ ಸಮಸ್ಯೆಗಳಾಗಿದ್ದಲ್ಲಿ ಅವುಗಳು ನಿವಾರಣೆಯಾಗುತ್ತವೆ. ಶುಭದಿನ 21. ಸೌಂದರ್ಯ ಲಹರಿ ಪಠಿಸಿರಿ.



**ಕಟಕ**

ನಿಮ್ಮ ನಡವಳಿಕೆ ವೃತ್ತಿಪರ ಬೆಳವಣಿಗೆಯನ್ನು ಬಂಧುಗಳು ಮೆಚ್ಚುತ್ತಾರೆ. ಸಾಲ ಮರುಪಾವತಿ ಮಾಡಲು ಸಾಧ್ಯವಾಗುತ್ತದೆ. ದೊಡ್ಡ ಮೊತ್ತದ ಹಣ ಸಂಗ್ರಹ ಮಾಡಲಿದ್ದೀರಿ. ವೃತ್ತಿಪರರಿಗೆ ಆದಾಯ ಹಾಗೂ ಜವಾಬ್ದಾರಿ ಎರಡೂ ಹೆಚ್ಚಾಗಲಿದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಆತಂಕ, ಉದ್ವೇಗಕ್ಕೆ ಒಳಗಾಗುತ್ತೀರಿ. ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಎಚ್ಚರಿಕೆಯಿಂದ ಇರಬೇಕು. ಶುಭದಿನ 20. ಲಿಂಗಾಷ್ಟಕ ಪಠಿಸಿರಿ.



**ಸಿಂಹ**

ಬಡ್ತಿ ನಿರೀಕ್ಷೆ ಮಾಡುತ್ತಿರುವವರು ಶುಭ ಸುದ್ದಿಯನ್ನು ಕೇಳಲಿದ್ದೀರಿ. ಆರೋಗ್ಯ ಉತ್ತಮವಾಗಿರುತ್ತದೆ. ನೀವು ಉತ್ಸಾಹದಿಂದ ಕಾಣಿಸಿಕೊಳ್ಳುತ್ತೀರಿ. ಆರ್ಥಿಕವಾಗಿ ಆದಾಯ ಹೆಚ್ಚಾಗುತ್ತಾ ಸಾಗುತ್ತದೆ. ವಾರದ ಮಧ್ಯಭಾಗದಲ್ಲಿ ವಿದೇಶ ವ್ಯವಹಾರ ಹಾಗೂ ಹೂಡಿಕೆಯಲ್ಲಿ ಲಾಭ ಪಡೆಯಲಿದ್ದೀರಿ. ಕೋರ್ಟ್ ಪ್ರಕರಣಗಳಲ್ಲಿ ಗೆಲುವು ಸಾಧಿಸುವ ಯೋಗವಿದೆ. ಶುಭದಿನ 19. ಗಣಪತಿಗೆ ದೂರ್ವಾರ್ಚನೆ ಮಾಡಿರಿ.



**ಕನ್ಯಾ**

ವಾರದ ಆರಂಭದಲ್ಲಿ ಭೂಮಿ ವಿಚಾರಕ್ಕೆ ಸಂಬಂಧಿಸಿದಂತೆ ಲಾಭ ಆಗಲಿದೆ. ಮನೆಯಲ್ಲಿ ಸಕಾರಾತ್ಮಕ ವಾತಾವರಣ ಇರಲಿದೆ. ನಿಮ್ಮ ಕಚೇರಿಯಲ್ಲಿ ಈವರೆಗೆ ತಿಳಿಯದಿದ್ದ ರಹಸ್ಯ ಸಂಗತಿಯೊಂದು ಗೊತ್ತಾಗಲಿದೆ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಇರುವವರು ವಾರದ ಮಧ್ಯ ಭಾಗದಲ್ಲಿ ಶುಭ ಸುದ್ದಿಯನ್ನು ಕೇಳಲಿದ್ದೀರಿ. ವೈಯಕ್ತಿಕ ಸಂಬಂಧದಲ್ಲಿ ಉತ್ತಮ ಗೌರವ ಇರಲಿದೆ. ಶುಭದಿನ 20. ಕಾಲಭೈರವನ ಸೇವೆ ಮಾಡಿರಿ.



**ತುಲಾ**

ವಾರದ ಶುರುವಿನಲ್ಲಿ ಬರಹವನ್ನೇ ವೃತ್ತಿಯಾಗಿ ಮಾಡಿಕೊಂಡವರಿಗೆ ಅತ್ಯುತ್ತಮವಾಗಿದೆ. ವೃತ್ತಿಯಲ್ಲಿ ಪ್ರಗತಿ ಕಾಣಲಿದ್ದೀರಿ. ಮಾಹಿತಿ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳಲಿದ್ದೀರಿ. ಕುಟುಂಬ ಸದಸ್ಯರ ಜೊತೆಗೆ ಉತ್ತಮ ಬಾಂಧವ್ಯ ಏರ್ಪಡಲಿದೆ. ಆರೋಗ್ಯ ಸ್ವಲ್ಪ ಮಟ್ಟಿಗೆ ಕ್ಷೀಣಿಸಬಹುದು. ಆಹಾರ ನೀರಿನ ಸೇವನೆಯಲ್ಲಿ ಎಚ್ಚರಿಕೆಯಿಂದ ಇರಬೇಕು. ಶುಭದಿನ 24. ವಿಷ್ಣು ಸಹಸ್ರನಾಮ ಪಠಿಸಿರಿ.



**ವೃಶ್ಚಿಕ**

ಭೂಮಿ ಆಸ್ತಿ ವಿಚಾರದಲ್ಲಿ ಲಾಭ ಪಡೆಯುವ ಯೋಗವಿದೆ. ಪಿತ್ರಾರ್ಜಿತ ಆಸ್ತಿಯಲ್ಲಿ ನಾನಾ ಬಿಕ್ಕಟ್ಟುಗಳು ಕಾಣಿಸಿಕೊಳ್ಳಬಹುದು. ಮನೆಯಲ್ಲಿ ಶುಭ ಕಾರ್ಯಗಳನ್ನು ಆಯೋಜಿಸಲಿದ್ದೀರಿ. ಕಾನೂನು ಕಟ್ಲೆಗಳಲ್ಲಿ ನಿಮ್ಮ ಪರವಾದ ಪ್ರಗತಿ ಇದೆ. ಮಾರಾಟ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ನಿರ್ಧಾರಿತ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ. ಶುಭದಿನ 22. ಈಶ್ವರನಿಗೆ ರುದ್ರಾಭಿಷೇಕ ಮಾಡಿರಿ.



**ಧನಸ್ಸು**

ವಾರದ ಆರಂಭದಲ್ಲೇ ಶುಭ ಸುದ್ದಿ ಕೇಳಲಿದ್ದೀರಿ. ಆರೋಗ್ಯ ಉತ್ತಮವಾಗಿರಲಿದೆ. ಈ ಹಿಂದಿನ ದೈಹಿಕ ಸಮಸ್ಯೆಗಳು ನಿವಾರಣೆಯಾಗಲಿವೆ. ಆತ್ಮವಿಶ್ವಾಸ– ಸಕಾರಾತ್ಮಕ ಆಲೋಚನೆ ವೃದ್ಧಿಯಾಗಲಿದೆ. ದೈನಂದಿನ ವ್ಯವಹಾರಗಳಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳದೆ ಮುಂದುವರಿಯಿರಿ. ಇನ್ನು ಹಣಕಾಸಿನ ಅನುಕೂಲ ಆಗಲಿದೆ. ಶುಭದಿನ 25. ಸುಬ್ರಹ್ಮಣ್ಯ ಜಪ ಗೋಪೂಜೆ ಮಾಡಿರಿ.



**ಮಕರ**

ಹಣಕಾಸು ಹೂಡಿಕೆ ಮಾಡಿದ್ದನ್ನು ಈಗ ಬಳಸಿಕೊಳ್ಳಲು ಮುಂದಾಗಲಿದ್ದೀರಿ. ಕೋರ್ಟ್ ವ್ಯವಹಾರಗಳು ನಿಮ್ಮ ಪರವಾಗುವ ಸಾಧ್ಯತೆ ಇದೆ. ಉದ್ಯಮದಲ್ಲಿ ಉನ್ನತ ಸ್ಥಾನವನ್ನು ತಲುಪಲು ನಿಟ್ಟನಲ್ಲಿ ಮುಖ್ಯವಾದ ತೀರ್ಮಾನ ಕೈಗೊಳ್ಳಲಿದ್ದೀರಿ. ಸಹೋದ್ಯೋಗಿಗಳ ಜೊತೆ ಮುಖ್ಯವಾದ ಚರ್ಚೆ ನಡೆಸಲಿದ್ದೀರಿ. ಸಂಗಾತಿ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಶುಭದಿನ 23. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.



**ಕುಂಭ**

ಆರ್ಥಿಕ ಪ್ರಗತಿ ಸಾಧಿಸಲು ಉತ್ತಮ ಅವಕಾಶಗಳಿವೆ. ಹಣದ ಗಳಿಕೆ ಆಗಲಿದೆ. ಬೌದ್ಧಿಕ ಮತ್ತು ದೈಹಿಕ ಸಾಮರ್ಥ್ಯ ವೃದ್ಧಿ ಆಗಲಿದೆ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಅದೃಷ್ಟ ಪರೀಕ್ಷೆ ಮಾಡಬಹುದು. ಪ್ರಾಮಾಣಿಕ ಪರಿಶ್ರಮ ಹಾಕಿದರೆ ಯಶಸ್ಸು ದೊರೆಯುವ ಅವಕಾಶ ಹೆಚ್ಚಾಗಿದೆ. ಸಂತಾನ ಅಪೇಕ್ಷಿತರಿಗೆ ಶುಭ ಸುದ್ದಿ ಸಿಗಲಿದೆ. ವಿದೇಶ ಪ್ರಯಾಣ ಯೋಗ ಕೂಡ ಇದೆ. ಶುಭದಿನ 22. ಕನಕಧಾರಾ ಸ್ತೋತ್ರ ಪಠಿಸಿರಿ.



**ಮೀನ**

ಶ್ರಮಕ್ಕೆ ತಕ್ಕಂತೆ ಫಲಿತಾಂಶ ನಿಮಗೆ ದೊರೆಯಲಿದೆ. ಉದ್ಯೋಗ ಸಂದರ್ಶನದಲ್ಲಿ ಯಶಸ್ಸು ಸಿಗಲಿದೆ. ನಿಮ್ಮ ಕೆಲಸಕ್ಕೆ ಮೆಚ್ಚುಗೆ ಪುರಸ್ಕಾರಗಳು ಲಭಿಸಲಿವೆ. ಕೌಟುಂಬಿಕ ಜೀವನ ಆರಾಮವಾಗಿ ಇರುತ್ತದೆ. ಸಾಮಾಜಿಕ ಕಾರ್ಯಗಳಿಗೆ ನೆರವು ನೀಡಲಿದ್ದೀರಿ. ಈ ಕೆಲಸದ ಜೊತೆಗೆ ಮತ್ತೊಂದು ಕೆಲಸವನ್ನು ಒಪ್ಪಿಕೊಳ್ಳಲಿದ್ದೀರಿ. ರುಚಿಕಟ್ಟಾದ ಆಹಾರ ನಿಮ್ಮ ಪಾಲಿಗೆ ಇವೆ. ಶುಭದಿನ 24.ಚಂಡಿ ಪಾರಾಯಣ ಮಾಡಿರಿ.